ಕರ್ನಾಟಕ ವಿಧಾನ ಪರಿಷತ್ತು

1)	ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	: 2451
2)	ಸದಸ್ಯರ ಹೆಸರು	: ಶ್ರೀ ಪ್ರಕಾಶ್ ಕೆ.ರಾಥೋಡ್ (ನಾಮನಿರ್ದೇಶನ ಹೊಂದಿದವರು)
3)	ಉತ್ತರಿಸಬೇಕಾದ ದಿನಾಂಕ	: 23-03-2022
4)	ಉತ್ತರಿಸಬೇಕಾದ ಸಚಿವರು	: ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

	ಪ್ರಶ್ನೆ	ಉತ್ತರ
ಅ	ರಾಜ್ಯದಲ್ಲಿರುವ ಮೀನುಗಾರರಿಗೆ ಎಷ್ಟು ಪ್ರಮಾಣದ ಡೀಸೆಲ್ ಮೇಲಿನ ಕರವನ್ನು ಹಿಂದಿರುಗಿಸಲಾಗಿದೆ; ಯಾವ ಆಧಾರದ ಮೇರೆಗೆ ಹಿಂದಿರುಗಿಸಲಾಗಿದೆ; (ವಿವರ ಒದಗಿಸುವುದು)	2015-16ನೇ ಸಾಲಿನಿಂದ 2021 ಮೇ ಮಾಹೆಯವರೆಗೆ "ಮೀನುಗಾರಿಕಾ ದೋಣಿಗಳು ಬಳಸುವ ಡೀಸೆಲ್ ಮೇಲಿನ ಮಾರಾಟ ತೆರಿಗೆ ಮರುಪಾವತಿ" ಯೋಜನೆಯಡಿ ಯಾಂತ್ರೀಕೃತ ದೋಣಿ ಮಾಲೀಕರು ಖರೀದಿಸಿದ ಡೀಸೆಲ್‌ಗೆ ಮಾರಾಟಕರ ಮರುಪಾವತಿ ಮಾಡಲಾಗುತ್ತಿತ್ತು. ಸದರಿ ಯೋಜನೆಯಡಿ ವಾರ್ಷಿಕ 1.50 ಲಕ್ಷ ಕಿಲೋ ಲೀಟರ್ ಡೀಸೆಲ್ ಮೇಲಿನ ಮಾರಾಟ ಕರವನ್ನು ಮರುಪಾವತಿ ಮಾಡಲು ಅವಕಾಶವಿತ್ತು. ಅದರಂತೆ National Informatics Centre (NIC) ರವರಿಂದ ತಂತ್ರಾಂಶ ಅಭಿವೃದ್ಧಿಪಡಿಸಿ ರಾಜ್ಯ ಮಾರಾಟ ತೆರಿಗೆ ಸಮಾನವಾದ ಮೊತ್ತವನ್ನು ದೋಣಿ ಮಾಲೀಕರ ಬ್ಯಾಂಕ್ ಖಾತೆಗೆ ನೇರ ನಗದು ವರ್ಗಾವಣೆ (DBT) ಮುಖಾಂತರ ಪಾವತಿಸಲಾಗುತ್ತಿತ್ತು. 2021-22 ನೇ ಸಾಲಿನಲ್ಲಿ ರೂ.84.86 ಕೋಟಿಗಳಷ್ಟು ಮೊತ್ತವನ್ನು ಮೀನುಗಾರರಿಗೆ ಮರುಪಾವತಿಸಲಾಗಿದೆ. ದೋಣಿಗಳ ಇಂಜಿನ್ ಅಶ್ವಶಕ್ತಿಗನುಗುಣವಾಗಿ ಪ್ರತಿ ದೋಣಿಗೆ ಈ ಕೆಳಗಿನಂತೆ ಮಾಸಿಕ ಮಿತಿ ನಿಗದಿಪಡಿಸಿರುತ್ತದೆ:- **ಕ್ರ. ಸಂ** / **ದೋಣಿಯ ಇಂಜಿನ್‌ನ ಅಶ್ವ ಶಕ್ತಿ** / **ಮಾಸಿಕ ಡೀಸೆಲ್ ಮಿತಿ (ಲೀಟರ್‌ಗಳಲ್ಲಿ)** 1 / 40 ಹೆಚ್‌ಪಿ ವರೆಗೆ / 2100 2 / 40-70 ಹೆಚ್‌ಪಿ / 2700 3 / 70-90 ಹೆಚ್‌ಪಿ / 4500 4 / 90-130 ಹೆಚ್‌ಪಿ / 7500 5 / 130-350 ಹೆಚ್‌ಪಿ / 9000 2021-22 ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ-71 ರಲ್ಲಿ ಡೀಸೆಲ್ ವಿತರಣೆ ಪ್ರಕ್ರಿಯೆಯನ್ನು ಮತ್ತಷ್ಟು ಜನಸ್ನೇಹಿಯನ್ನಾಗಿಸಲು **2021-22 ನೇ ಸಾಲಿನಿಂದ ಡೀಸೆಲ್ ಡೆಲಿವರಿ ಪಾಯಿಂಟ್‌ನಲ್ಲಿಯೇ ಕರರಹಿತ ದರದಲ್ಲಿ ಡೀಸೆಲ್‌ನ್ನು ವಿತರಿಸಲಾಗುವುದು** ಎಂದು ಘೋಷಿಸಲಾಗಿರುತ್ತದೆ. ಅದರಂತೆ, ಕರರಹಿತ ಡೀಸೆಲ್‌ನ್ನು ಡೆಲಿವರಿ ಪಾಯಿಂಟ್‌ನಲ್ಲಿ ವಿತರಿಸಲು ಸರ್ಕಾರದ ಆದೇಶ ಸಂಖ್ಯೆ: ಪಸಂಮೀ/ಇ-157/ಮೀಇಯೋ/2021 ದಿನಾಂಕ: 16-06-2021 ರಲ್ಲಿ ಆದೇಶಿಸಲಾಗಿದೆ. ಮುಂದುವರೆದು, ಪ್ರಸಕ್ತ ಸಾಲಿಗೆ ಮಾತ್ರ ಮಾರಾಟ ಕರರಹಿತ ಡೀಸೆಲ್‌ನ ವಾರ್ಷಿಕ ಮಿತಿಯನ್ನು 1.125 ಲಕ್ಷ ಕಿಲೋಲೀಟರ್ ಪ್ರಮಾಣ ನಿಗದಿಪಡಿಸಿ

		ಆಗಸ್ಟ್ ಮಾಹೆಯಿಂದ ಕರರಹಿತ ಡೀಸೆಲ್‌ನ್ನು ವಿತರಿಸಲು ಆದೇಶಿಸಿರುತ್ತದೆ (ಆದೇಶ ಸಂ:ಎಫ್‌ಡಿ/58/ಸಿಎಸ್‌ಎಲ್/2021 ದಿನಾಂಕ: 30-06-2021). ಅದರಂತೆ, ಕರರಹಿತ ಡೀಸೆಲ್‌ನ್ನು ಡೆಲಿವರಿ ಪಾಯಿಂಟ್‌ನಲ್ಲಿಯೇ ವಿತರಿಸಲು ಈಗ ಇರುವ NIC ತಂತ್ರಾಂಶವನ್ನೇ ಉನ್ನತೀಕರಿಸಿಕೊಂಡು ದೋಣಿಗಳ ಇಂಜಿನ್ ಅಶ್ವಶಕ್ತಿಗನುಗುಣವಾಗಿ ಪ್ರತಿ ದೋಣಿಗೆ ಮಾಸಿಕ ಮಿತಿಯೊಳಗೇ ಡೀಸೆಲ್ ಬಂಕ್ ನವರು ಡೀಸೆಲ್‌ನ್ನು ವಿತರಿಸುವಂತೆ ಆಗಸ್ಟ್ ಮಾಹೆಯಿಂದ ಕ್ರಮವಹಿಸಲಾಗಿದೆ.
ಆ	ಪ್ರಧಾನಮಂತ್ರಿ ಮತ್ಸ್ಯ ಸಂಪದ ಯೋಜನೆಯಲ್ಲಿ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ; ಇದರಲ್ಲಿ ಕೇಂದ್ರದ ಹಾಗೂ ರಾಜ್ಯ ಸರ್ಕಾರದ ಪಾಲೆಷ್ಟು? (ವಿವರ ಒದಗಿಸುವುದು)	ಪ್ರಧಾನಮಂತ್ರಿ ಮತ್ಸ್ಯಸಂಪದ ಯೋಜನೆಯು 2020-21ನೇ ಸಾಲಿನಿಂದ ಜಾರಿಗೆ ಬಂದಿದ್ದು, 2020-21ನೇ-ಸಾಲಿಗೆ ಕೇಂದ್ರ ಸರ್ಕಾರವು ರೂ.50.3326 ಕೋಟಿ ನಿಗದಿಪಡಿಸಿದ್ದು, ಈಗಾಗಲೇ ರೂ.46.18 ಕೋಟಿಗಳನ್ನು ಬಿಡುಗಡೆ ಮಾಡಿರುತ್ತದೆ. ಸದರಿ ಮೊತ್ತಕ್ಕೆ ಅನುಗುಣವಾಗಿ ರಾಜ್ಯ ಸರ್ಕಾರವು ರೂ. 33.02 ಕೋಟಿಗಳನ್ನು ಬಿಡುಗಡೆ ಮಾಡಿರುತ್ತದೆ. 2021-22ನೇ ಸಾಲಿಗೆ ಕೇಂದ್ರ ಸರಕಾರವು ರೂ.70.00 ಕೋಟಿ ನಿಗದಿಪಡಿಸಿದ್ದು, ರೂ.35.25 ಕೋಟಿಗಳನ್ನು ಬಿಡುಗಡೆ ಮಾಡಿರುತ್ತದೆ ಸದರಿ ಮೊತ್ತಕ್ಕೆ ಅನುಗುಣವಾಗಿ ರಾಜ್ಯ ಸರ್ಕಾರವು ರೂ. 13.63 ಕೋಟಿ ಬಿಡುಗಡೆ ಮಾಡಿರುತ್ತದೆ.

ಸಂಖ್ಯೆ: ಪಸಂಮೀ ಇ-102 ಮೀಇಯೋ 2022

(ಎಸ್. ಅಂಗಾರ)
ಮೀನುಗಾರಿಕೆ, ಬಂದರು ಮತ್ತು
ಒಳನಾಡು ಜಲಸಾರಿಗೆ ಸಚಿವರು